ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: STP /263/07-08

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
7ನೇ ಮಹಡಿ, ಜಲಮಂಡಳಿ ಕಟ್ಟಡ,
ಕಾವೇರಿ ಭವನ, ಬೆಂಗಳೂರು,
ದಿನಾಂಕ: 27-10-2007.

## ಸುತ್ತೋಲೆ

**ವಿಷಯ :** ಕರ್ನಾಟಕ ಮುದ್ರಾಂಕ ಕಾಯ್ದೆ ಕಲಂ 10-ಎ ಪ್ರಕಾರ ದೃಢೀಕರಣ ನೀಡುವ ಬಗ್ಗೆ.

**ಉಲ್ಲೇಖ:** 1. ಸುತ್ತೋಲೆ ಸಂಖ್ಯೆ: STP/220/05-06, ದಿನಾಂಕ: 03-02-2006.

2. ಅಧಿಸೂಚನೆ ಸಂಖ್ಯೆ: RD 264 ಮುನೋಮು 99, ದಿನಾಂಕ: 18-08-1999.

*-*-*-*-*-*

1957ರ ಕರ್ನಾಟಕ ಮುದ್ರಾಂಕ ಕಾಯ್ದೆಯ, ಕಲಂ 10-ಎ ರನ್ವಯ ಸಾರ್ವಜನಿಕರು ದಸ್ತಾವೇಜುಗಳಿಗೆ ಭರಿಸಬೇಕಾದ ಮುದ್ರಾಂಕ ಶುಲ್ಕವನ್ನು ನಗದು ರೂಪದಲ್ಲಿ ಅಥವಾ ಬ್ಯಾಂಕ್ ಡಿ.ಡಿ./ ಪೇ-ಆರ್ಡರ್ ಅಥವಾ ಬ್ಯಾಂಕ್ / ಖಜಾನೆಯಲ್ಲಿ ಪಾವತಿ ಮಾಡಿರುವುದಕ್ಕೆ ಚಲನ್ ಅನ್ನು ಸಂಬಂಧಿಸಿದ ಅಧಿಕಾರಿಗಳಿಂದ ಮೇಲು ಸಹಿ ಮಾಡಿಸಿ, ದಸ್ತಾವೇಜಿನ ಮೇಲೆ ಮುದ್ರಾಂಕ ಶುಲ್ಕವನ್ನು ದೃಢೀಕರಣ ಮಾಡಿಸಿಕೊಳ್ಳಬೇಕಾಗಿದೆ.

ಉಲ್ಲೇಖ (2) ರಂತೆ ಕಲಂ 10-ಎ ಪ್ರಕಾರ ಹೊರಡಿಸಿದ ಅಧಿಸೂಚನೆಯಂತೆ ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಉಪ ನೋಂದಣಾಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಬರುವ ನೋಂದಣಿಗೆ ಕಡ್ಡಾಯವಾಗಿರುವ ದಸ್ತಾವೇಜುಗಳಿಗಾಗಿ ಮುದ್ರಾಂಕ ಪಾವತಿಯನ್ನು ದೃಢೀಕರಿಸಬೇಕಾಗುತ್ತದೆ. ನೋಂದಣಿಗೆ ಐಚ್ಛಿಕವಾಗಿರುವ ದಸ್ತಾವೇಜುಗಳಿಗಾಗಿ ತಮ್ಮ ಕಾರ್ಯ ವ್ಯಾಪ್ತಿಯನ್ನು ಪರಿಗಣಿಸದೇ ಮುದ್ರಾಂಕ ಪಾವತಿಯನ್ನು ದೃಢೀಕರಿಸಬೇಕಾಗುತ್ತದೆ.

ಕೆಲವು ಉಪ ನೋಂದಣಾಧಿಕಾರಿಗಳು ನೋಂದಣಿಗೆ ಐಚ್ಛಿಕವಾಗಿರುವ ದಸ್ತಾವೇಜುಗಳಿಗಾಗಿ ಈ ಅಧಿಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸದೇ ಇರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಕಾರಣ ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಉಪ ನೋಂದಣಾಧಿಕಾರಿಗಳು ಸದರಿ ಅಧಿಸೂಚನೆಯಂತೆ ನೋಂದಣಿಗೆ ಐಚ್ಛಿಕವಾಗಿರುವ ದಸ್ತಾವೇಜುಗಳಿಗೆ ತಮ್ಮ ಕಾರ್ಯವ್ಯಾಪ್ತಿಯ ಮಿತಿಯನ್ನು ಪರಿಗಣಿಸದೇ ಮುದ್ರಾಂಕ ಪಾವತಿಯನ್ನು ದೃಢೀಕರಿಸುವಂತೆ ಈ ಮೂಲಕ ಸೂಚನೆ ನೀಡಲಾಗಿದೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

**ಪ್ರತಿಯನ್ನು :**

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಕೇಂದ್ರ ಕಛೇರಿಯ RGN / IRF / AUD / BUD ಶಾಖೆಗಳಿಗೆ ಮಾಹಿತಿಗಾಗಿ.
3. ಕಛೇರಿ ಪ್ರತಿ.